# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ :
No.
ಬೆಂಅಪ್ರಾ/ನಮ/ಅಸ/ಅಅ-3/ತಾಸ-2/ದ/14/2023-24

ದಿನಾಂಕ :
Date :
ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು, ದಿನಾಂಕ:28-06-2023.

**ಅನುಸೂಚಿ-ಎ 5**
**(ಉಪವಿಧಿ ಸಂಖ್ಯೆ : 4.1)**
**ನಕ್ಷೆ ಮಂಜೂರಾತಿ ಪತ್ರ**

**ಶ್ರೀಮತಿ/ಶ್ರೀ,**

ಶ್ರೀ ಹೆಚ್.ಟಿ.ಸೋಮಶೇಖರ ರೆಡ್ಡಿ ಮತ್ತು
ಶ್ರೀಮತಿ ಹೆಚ್.ಎಸ್.ನಾಗಮಣಿ,
#398, 11ನೇ ಮುಖ್ಯರಸ್ತೆ, 3ನೇ ಹಂತ,
ಕೋರಮಂಗಲ, ಬೆಂಗಳೂರು - 560 034.

**ಮಾನ್ಯರೆ,**

ವಿಷಯ : **ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.333/1 ರಲ್ಲಿ 4ಎ-00 ಗುಂಟೆ ಮತ್ತು ಸರ್ವೆ ನಂ.333/2 ರಲ್ಲಿ 04 ಎ-00 ಗುಂಟೆ [0-05 ಗುಂಟೆ ಖರಾಬು ಹೊರತುಪಡಿಸಿ] ಒಟ್ಟು 8ಎ-00 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡುವ ಕುರಿತು.**

ಉಲ್ಲೇಖ :
1. ಅರ್ಜಿದಾರರ ಮನವಿ ಪತ್ರ ದಿನಾಂಕ:17-04-2023.
2. ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:1454, ದಿನಾಂಕ:12-06-2023.

******

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.333/1 ರಲ್ಲಿ 4ಎಕರೆ 00 ಗುಂಟೆ ಮತ್ತು ಸರ್ವೆ ನಂ.333/2 ರಲ್ಲಿ 04ಎಕರೆ-00 ಗುಂಟೆ [0-05 ಗುಂಟೆ ಖರಾಬು ಹೊರತುಪಡಿಸಿ] ಒಟ್ಟು 08ಎ-00 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ Block-1, 3, 5, 7, 9, 11 ರ ಕಟ್ಟಡಗಳಲ್ಲಿ ನೆಲ+02ಮೇಲಂತಸ್ತು+ ಮೇಲುಮಹಡಿಗಳಲ್ಲಿ ಒಟ್ಟು 38 ವಸತಿ ಘಟಕಗಳು, Block-2, 4, 6, 8, 10 ರ ಕಟ್ಟಡಗಳಲ್ಲಿ ನೆಲ+ 02ಮೇಲಂತಸ್ತು +ಮೇಲುಮಹಡಿಗಳಲ್ಲಿ ಒಟ್ಟು 35 ವಸತಿ ಘಟಕಗಳು, Block-12 ರ ಕಟ್ಟಡದಲ್ಲಿ ನೆಲ+02ಮೇಲಂತಸ್ತು +ಮೇಲುಮಹಡಿಗಳಲ್ಲಿ ಒಟ್ಟು 20 ವಸತಿ ಘಟಕಗಳು & Block-13 ರ ಕಟ್ಟಡದಲ್ಲಿ ನೆಲ+02ಮೇಲಂತಸ್ತು +ಮೇಲುಮಹಡಿಗಳಲ್ಲಿ ಒಟ್ಟು 10 EWS ವಸತಿ ಘಟಕಗಳು ಒಟ್ಟಾರೆ 93 ವಸತಿ ಘಟಕಗಳು+10 EWS ವಸತಿ ಘಟಕಗಳ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿ ನಕ್ಷೆ ಮಂಜೂರಾತಿ ನೀಡುವಂತೆ ತಾವು ಉಲ್ಲೇಖ ಪತ್ರ (01) ರಲ್ಲಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಕೋರಿರುತ್ತೀರಿ.

ಅದರನ್ವಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರವರು, ಆದೇಶ ಸಂಖ್ಯೆ:1454, ದಿನಾಂಕ:12-06-2023 ರಲ್ಲಿ ಸದರಿ ವಸತಿ ಕಟ್ಟಡದ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ತಾವು ನಕ್ಷೆ ಮಂಜೂರಾತಿ ಶುಲ್ಕಗಳ ಮೊತ್ತವಾದ **ರೂ.61,01,550.00/- (ಅರವತ್ತೊಂದು ಲಕ್ಷದ ಒಂದು ಸಾವಿರದ ಐದುನೂರ ಐವತ್ತು ರೂಪಾಯಿಗಳು ಮಾತ್ರ)** ಗಳನ್ನು ಪ್ರಾಧಿಕಾರದ ಆವರಣದಲ್ಲಿರುವ **ಕೆನರಾ ಬ್ಯಾಂಕ್ ಚಲನ್ ಸಂಖ್ಯೆ:GN23061823, ದಿನಾಂಕ:16-06-2023** ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರಿ.

. . .2/-

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಆದುದರಿಂದ, ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.333/1 ಮತ್ತು ಸರ್ವೆ ನಂ.333/2 ರಲ್ಲಿ ಒಟ್ಟು 08 ಎಕರೆ-00ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ Block-1, 3, 5, 7, 9, 11 ರ ಕಟ್ಟಡಗಳಲ್ಲಿ ನೆಲ+02ಮೇಲಂತಸ್ತು+ಮೇಲುಮಹಡಿಗಳಲ್ಲಿ ಒಟ್ಟು 38 ವಸತಿ ಘಟಕಗಳು, Block-2, 4, 6, 8, 10 ರ ಕಟ್ಟಡಗಳಲ್ಲಿ ನೆಲ+02ಮೇಲಂತಸ್ತು+ಮೇಲುಮಹಡಿಗಳಲ್ಲಿ ಒಟ್ಟು 35 ವಸತಿ ಘಟಕಗಳು, Block-12 ರ ಕಟ್ಟಡದಲ್ಲಿ ನೆಲ+02ಮೇಲಂತಸ್ತು +ಮೇಲುಮಹಡಿಗಳಲ್ಲಿ ಒಟ್ಟು 20 ವಸತಿ ಘಟಕಗಳು ಮತ್ತು Block-13 ರ ಕಟ್ಟಡದಲ್ಲಿ ನೆಲ+02ಮೇಲಂತಸ್ತು+ ಮೇಲುಮಹಡಿಗಳಲ್ಲಿ ಒಟ್ಟು 10 EWS ವಸತಿ ಘಟಕಗಳು ಒಟ್ಟಾರೆ 93 ವಸತಿ ಘಟಕಗಳು + 10 EWS ವಸತಿ ಘಟಕಗಳ ಕಟ್ಟಡಕ್ಕೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ದಿನಾಂಕ:28-06-2023 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. **ಈ ನಕ್ಷೆ ಮಂಜೂರಾತಿಯು ದಿನಾಂಕ:28-06-2023 ರಿಂದ ದಿನಾಂಕ:27-06-2025 ರವರೆಗೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ** ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

## ಪಾಲಿಸಬೇಕಾದ ಷರತ್ತುಗಳು

1) ಬೆಂಗಳೂರು ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.333/1 ರಲ್ಲಿ **4ಎ-00 ಗುಂಟೆ ಮತ್ತು ಸರ್ವೆ ನಂ.333/2 ರಲ್ಲಿ 04 ಎ-00 ಗುಂಟೆ [0-05 ಗುಂಟೆ ಖರಾಬು ಹೊರತುಪಡಿಸಿ]** ಒಟ್ಟು 08 ಎ-00ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನಾ ಕಟ್ಟಡದ ನಕ್ಷೆಗೆ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಠರಾವು ಸಂಖ್ಯೆ.5.4.5/2022, ದಿನಾಂಕ:17-12-2022 ರಲ್ಲಿ ಅನುಮೋದಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ:ಬೆಂಅಪ್ರಾ/ ನಯೋಸ /DLP-31/2022-23/4081/2022-23, ದಿ:30-03-2023 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
2) ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ವಿವಿಧ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.
3) ಕಟ್ಟಡ ನಕ್ಷೆಯಲ್ಲಿ Sewage Treatment Plant, Solid Waste Management, RWH ಮತ್ತು Transformer Yard ಗಾಗಿ ಸೂಕ್ತ ಜಾಗವನ್ನು ಕಾಯ್ದಿರಿಸಿ, ಅದೇ ರೀತಿಯಾಗಿ ಅಭಿವೃದ್ಧಿ ಪಡಿಸುವುದು ಹಾಗೂ Transformer Yard ಗೆ KPTCL ನಿಯಮಾವಳಿಯಂತೆ ಅಳವಡಿಸುವುದು.
4) KSPCB, SEIAA, BESCOM, ಅಗ್ನಿಶಾಮಕ ಇಲಾಖೆ, Airport Authority, BSNL ಗಳಿಂದ ಪ್ರಸ್ತುತ ಕಟ್‌ಟಡ ನಿರ್ಮಿತ ಪ್ರದೇಶಕ್ಕೆ (BUA) ಅನುಗುಣವಾಗಿ ನವೀಕರಿಸಿದ NOC ಪತ್ರವನ್ನು ಪಡೆದು ಪ್ರಾರಂಭಿಕ ಪ್ರಮಾಣ ಪತ್ರ/ಸ್ವಾಧೀನಾನುಭವ ಪತ್ರ ಕೋರಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು. ಇಲ್ಲವಾದಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಲಾಗುವುದಿಲ್ಲ.
5) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಸರಬರಾಜು ಕುರಿತು ವಿವರವಾದ ವರದಿಯನ್ನು ಸಲ್ಲಿಸುವುದು ಹಾಗೂ ಕುಡಿಯುವ ನೀರು ಮತ್ತು ಇತರೆ ಉಪಯೋಗಗಳಿಗೆ Dual Piping System ಅನ್ನು BWSSB ರವರ ನಿರ್ದೇಶನದಂತೆ ಅಳವಡಿಸುವುದು

...3/-

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

6) ಬಂಡಿದಾರಿ/ರಾಜಕಾಲುವೆ/ಮಳೆನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

7) ಅರ್ಜಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸುವುದು ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಗೊಳಿಸಲಾಗುವುದು.

8) ಸದರಿ ಕಟ್ಟಡದಲ್ಲಿ ಮೂಲ ಸೌಕರ್ಯಕ್ಕಾಗಿ ಕಾಯ್ದಿರಿಸಿರುವ ಜಾಗವನ್ನು ವಸತಿ ಕಟ್ಟಡದಲ್ಲಿನ ನಿವಾಸಿಗಳಿಗೆ ಮಾತ್ರ ಬಳಸಬೇಕಾಗಿದ್ದು, ವಾಣಿಜ್ಯ ಉದ್ದೇಶಕ್ಕಾಗಿ ಬಳಸುವಂತಿಲ್ಲ.

9) ಪ್ರಾಧಿಕಾರದಿಂದ ಮಂಜೂರಾದ ಕಟ್ಟಡ ನಕ್ಷೆಯಂತೆಯೇ ಉದ್ದೇಶಿತ ಕಟ್ಟಡಕ್ಕೆ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ತಪ್ಪಿದಲ್ಲಿ ಮಂಜೂರಾದ ನಕ್ಷೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

10) ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯವರ ಸಲಹೆ ಪಡೆದು ಕಡ್ಡಾಯವಾಗಿ ಅಳವಡಿಸತಕ್ಕದ್ದು.

11) ಅರ್ಜಿದಾರರು ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

12) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಸ್ವಾಧೀನಾನುಭವ ಪತ್ರ (Occupation Certificate) ಪಡೆಯುವ ನಿಮ್ಮ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

13) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರವರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು/ ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

14) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.

15) ಕಟ್ಟಡ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/- ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 01 % ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.

16) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.

17) ಸದರಿ ಕಟ್ಟಡಕ್ಕೆ ವಿದ್ಯುತ್ ಚ್ಛಕ್ತಿ ವ್ಯವಸ್ಥೆಯನ್ನು BESCOM ವತಿಯಿಂದ ಕಲ್ಪಿಸತಕ್ಕದ್ದು & ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಛಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

18) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

. . . 4/-

19) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.

20) ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗಧಿಪಡಿಸಿದ ಹಣವನ್ನು ಸಂದಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.

21) ಅರ್ಜಿದಾರರು Occupancy Certificate ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು Sewage Treatment Plant ಹಾಗೂ Rain Water Harvesting ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ BWSSB ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

22) ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (STP) ಮಂಜೂರಾದ ನಕ್ಷೆಯಲ್ಲಿ ತೋರಿಸಿದಂತೆ ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ಪೂರ್ಣ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿಗವೆ/ಹೊಳೆಗೆ ಬಿಡತಕ್ಕದ್ದಲ್ಲ.

23) ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿನ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

24) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Drywaste ಮತ್ತು Wetwaste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

25) ಕಾಮಗಾರಿ ಪ್ರಾರಂಭಿಸುವುದಕ್ಕಿಂತ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಖಾತಾ ಪತ್ರ ಪಡೆಯುವುದು.

26) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

27) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

28) ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದ ನೀಡುವ 45727-45730/2011 (ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

29) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

30) ಅರ್ಜಿದಾರರು ನಕ್ಷೆ ಮಂಜೂರಾತಿ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ/ದಾಖಲಾತಿ ಸಲ್ಲಿಸಿರುವುದು ಕಂಡುಬಂದಲ್ಲಿ, ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ಮಂಜೂರಾದ ನಕ್ಷೆಯು ತನ್ನಿಂತಾನೆ ರದ್ದಾಗುವುದು ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗುವುದು.

31) ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C&D/2016/5392/2020-21 ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೆ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು.

32) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

. . . .5/-

ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ. ಆದುದರಿಂದ ನಿರ್ಮಾಣ ಸಮಯದಲ್ಲಿ ಎಲ್ಲಾ ಜಾಗೃತ / ಸುರಕ್ಷಿತ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿ ಯಾವ ಮುನ್ಸೂಚನೆ ಇಲ್ಲದೇ ರದ್ದುಗೊಳಿಸಲಾಗುವುದು.

33) ಬಫರ್ ವಲಯಕ್ಕೆ ಸಂಬಂಧಿಸಿದಂತೆ ಮಾನ್ಯ ಹಸಿರು ನ್ಯಾಯಾಧಿಕರಣವು (NGT) ಈಗಾಗಲೇ ಹೊರಡಿಸಿರುವ ನಿರ್ದೇಶನಗಳಿಗೆ ಮತ್ತು ಆಗಿಂದಾಗ್ಗೆ ಹೊರಡಿಸುವ / ವಿಧಿಸುವ ಯಾವುದೇ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು ಹಾಗೂ ಬಫರ್ ವಲಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪು ಮಾಹಿತಿಯನ್ನು ನೀಡಿದಲ್ಲಿ ನಕ್ಷೆ ಮಂಜೂರಾತಿಯನ್ನು ರದ್ದುಪಡಿಸುವ ಷರತ್ತಿಗೆ ಒಳಪಟ್ಟಿದೆ.

34) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಯಥಾಪ್ರತಿಯನ್ನು :-

**ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ, ಬೆಂ.ಅ.ಪ್ರಾ., ಬಿಡಿಎ ವಾಣಿಜ್ಯ ಸಂಕೀರ್ಣ, ಬನಶಂಕರಿ 2ನೇ ಹಂತ ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.**

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಸಂಖ್ಯೆ: ಬೆಂಅಪ್ರಾ/ಅಸ/ಅಅ-3/ತಾಸ-2/T-284 2023-24

ಅಭಿಯಂತರ ಸದಸ್ಯರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು ದಿನಾಂಕ: 13-06-2023

ಇವರಿಗೆ,

ಶ್ರೀ ಹೆಚ್.ಟಿ.ಸೋಮಶೇಖರ ರೆಡ್ಡಿ ಮತ್ತು
ಶ್ರೀಮತಿ ಹೆಚ್.ಎಸ್.ನಾಗಮಣಿ,
#398, 11ನೇ ಮುಖ್ಯರಸ್ತೆ, 3ನೇ ಹಂತ,
ಕೋರಮಂಗಲ, ಬೆಂಗಳೂರು - 560 034.

## ಸೂಚನಾ ಪತ್ರ

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.333/1 ರಲ್ಲಿ 4ಎ-00 ಗುಂಟೆ ಮತ್ತು ಸರ್ವೆ ನಂ.333/2 ರಲ್ಲಿ 04 ಎ-00 ಗುಂಟೆ [0-05 ಗುಂಟೆ ಖರಾಬು ಹೊರತುಪಡಿಸಿ] ಒಟ್ಟು 08 ಎಕರೆ-00ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ Block-1, 3, 5, 7, 9, 11 ರಲ್ಲಿ ನೆಲ+02ಮೇಲಂತಸ್ತು+ಮೇಲುಮಹಡಿಗಳಲ್ಲಿ ಒಟ್ಟು 38 ವಸತಿ ಘಟಕಗಳು, Block-2, 4, 6, 8, 10 ರಲ್ಲಿ ನೆಲ+02ಮೇಲಂತಸ್ತು+ಮೇಲುಮಹಡಿಗಳಲ್ಲಿ ಒಟ್ಟು 35 ವಸತಿ ಘಟಕಗಳು, Block-12 ರಲ್ಲಿ ನೆಲ+02ಮೇಲಂತಸ್ತು+ಮೇಲುಮಹಡಿಗಳಲ್ಲಿ ಒಟ್ಟು 20 ವಸತಿ ಘಟಕಗಳು ಮತ್ತು Block-13 ರಲ್ಲಿ ನೆಲ+02ಮೇಲಂತಸ್ತು+ ಮೇಲುಮಹಡಿಗಳಲ್ಲಿ ಒಟ್ಟು 10 EWS ವಸತಿ ಘಟಕಗಳು ಒಟ್ಟಾರೆ 93 ವಸತಿ ಘಟಕಗಳು + 10 EWS ವಸತಿ ಘಟಕಗಳ ಕಟ್ಟಡದ ನಕ್ಷೆ ಮಂಜೂರಾತಿಗೆ ಪ್ರಾಧಿಕಾರದ ಮಾನ್ಯ ಆಯುಕ್ತರವರು ಆದೇಶ ಸಂಖ್ಯೆ.1454, ದಿನಾಂಕ:12-06-2023 ರಂದು ಅನುಮೋದನೆ ನೀಡಿರುತ್ತಾರೆ. ಆದುದರಿಂದ, ಈ ಕೆಳಕಂಡ ಶುಲ್ಕಗಳನ್ನು "The Commissioner, BDA, Bangalore" ರವರ ಹೆಸರಿನಲ್ಲಿ ಬಿ.ಡಿ.ಎ ಆವರಣದಲ್ಲಿರುವ ಕೆನರಾ ಬ್ಯಾಂಕಿಗೆ ಪಾವತಿಸಲು ಸೂಚಿಸಿದೆ.

| ಅಕೌಂಡ್ ಕೋಡ್ | ಶುಲ್ಕಗಳ ವಿವರಗಳು | ಪ್ರಸ್ತುತ ಪಾವತಿಸಬೇಕಾಗಿರುವ ಶುಲ್ಕ (ರೂ) |
|---|---|---|
| 182 | ನಕ್ಷೆ ಪರಿಶೀಲನಾ ಶುಲ್ಕ | 11,92,209.00 |
| 191 | ನೆಲ ಬಾಡಿಗೆ | 11,92,209.00 |
| 189 | ಅಭಿವೃದ್ಧಿ ಶುಲ್ಕ | 52988.00 |
| 183 | ನಕ್ಷೆ ಪ್ರತಿಗಳ ಶುಲ್ಕ | 40000.00 |
| 199 | ಕೆರೆ ಅಭಿವೃದ್ಧಿ ಶುಲ್ಕ | 0.00 |
| | **ಒಟ್ಟು** | **24,77,406.00** |
| | **CGST 9%** | **222967.00** |
| | **SGST 9%** | **222967.00** |
| 537 | ಕೊಳಚೆ ನಿರ್ಮೂಲನಾ ಶುಲ್ಕ | 0.00 |
| 546 | ಕಾರ್ಮಿಕ ಕಲ್ಯಾಣ ನಿಧಿ | 18,53,487.00 |
| 493 | ಭದ್ರತಾ ಠೇವಣಿ | 13,24,676.00 |
| | ಪೂರ್ಣಾಂಕಕ್ಕೆ | **47.00** |
| | **ಪಾವತಿಸಬೇಕಿರುವ ಒಟ್ಟು ಮೊತ್ತ** | **61,01,550.00** |

**(ಅರವತ್ತೊಂದು ಲಕ್ಷದ ಒಂದು ಸಾವಿರದ ಐದುನೂರ ಐವತ್ತು ರೂಪಾಯಿಗಳು ಮಾತ್ರ)**

ಮೇಲೆ ನಮೂದಿಸಿದ ಶುಲ್ಕಗಳನ್ನು ಸೂಚನಾ ಪತ್ರ ನೀಡಿದ ದಿನಾಂಕದಿಂದ 30 ದಿನಗಳೊಳಗೆ ಬಿ.ಡಿ.ಎ ಖಾತೆಗೆ ಪಾವತಿಸಲು ಈ ಮೂಲಕ ತಿಳಿಸಲಾಗಿದೆ.

Dushyanth

ತಾಂತ್ರಿಕ ಸಹಾಯಕರು-2
ಅಭಿಯಂತರ ಸದಸ್ಯರವರ ಕಛೇರಿ
ಬೆಂ.ಅ.ಪ್ರಾ., ಬೆಂಗಳೂರು

ಪ್ರತಿಯನ್ನು:- ಮ್ಯಾನೇಜರ್, ಕೆನರಾ ಬ್ಯಾಂಕ್, ಬಿ.ಡಿ.ಎ ಎಕ್ಸ್ ಟೆನ್ಷನ್ ಕೌಂಟರ್, ಕುಮಾರಪಾರ್ಕ್ (ಪಶ್ಚಿಮ), ಬೆಂಗಳೂರು

*Recipient Copy*

# BANGALORE DEVELOPMENT AUTHORITY

T.Chowdaiah Road, Kumarapark West, Banglaore-560020
GSTIN:29AAALB0060D1ZS
PAN NO : AAALB0060D
State Name : Karnataka, Code : 29

## REMITTANCE CHALLAN

No. : **GN23061823** Date : **16-Jun-23**

Through : **2828201002001**

| Particulars | Amount |
|---|---|
| **Account :** | |
| 11182 PLAN PROCESSING / SCRUITINY FEE | **11,92,209.00** |
| 11191 GROUND RENT | **11,92,209.00** |
| 11189 Development charges | **52,988.00** |
| 11183 PLAN COPY / RCDP / REGN / RENWAL CONTRA FEE | **40,000.00** |
| 11199 Lake development fee | |
| 331530 CGST | **2,22,967.00** |
| 331531 SGST | **2,22,967.00** |
| 337537 SLUM CLEARANCE CESS | |
| 336546 W W C | **18,53,487.00** |
| 334493 Security deposit - contractors | **13,24,676.00** |
| 16188 Other allottee / Contractor receipts | **47.00** |

**Bank Transaction Details:**
11182 PLAN PROCESSING / SCRUITINY FEE,Axis Bank (India)
**RTGS** UTIBR52023061400361487 **14-Jun-23** **61,01,550.00**

**Amount (in words) :**
**INR Sixty One Lakh One Thousand Five Hundred Fifty Only**

**₹ 61,01,550.00**

**Name : H T SOMASHEKAR REDDY, H S NAGAMANI**
**Site No / Flat No : 333/1 333/2**
**Layout / Flat No :HULIMANGALA VILL JIGANI HOBLI ANEKAL TQ**

*GN23061823*

केनरा बैंक CANARA BANK 16 JUN 2023 बी.डी.ए. कॉम्पलेक्स शाखा, बेंगलूरु-560 020 B.D.A. COMPLEX BR., BENGALURU-560 020

**Bank Seal & Signatory**

**NOTE : MERE ACCEPTANCE OF THE REMITTANCE BY THE BANK DOES NOT AUTOMATICALLY CONFER ON THE PAYER'S BENEFITS EXPECTED FROM SUCH PAYMENTS. THE PAYER IS EXPECTED TO ENSURE COMPLIANCE WITH THE VARIOUS REQUIREMENTS OF BDA BEFORE NECESSARY BENEFITS ACCRUE TO HIM / HER.**

**(RECEIPTS ISSUED AGAINST PAY ORDERS / DRAFTS SUBJECT TO REALISATION)**